# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 29 (19)
ಸದಸ್ಯರ ಹೆಸರು : ಶ್ರೀ ಐವನ್ ಡಿ' ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 09/12/2024.
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು .

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಾಲಾ ಕಟ್ಟಡಗಳಲ್ಲಿ ಕಡ್ಡಾಯವಾಗಿ ಅಗ್ನಿಶಾಮಕ ಸಲಕರಣೆಗಳನ್ನು ಅಳವಡಿಸಬೇಕೆಂದು ಇಲಾಖೆ ಸೂಚನೆ ನೀಡಿ, ಪುರಾತನ ಶಾಲೆಗಳಿಗೆ ಮಾನ್ಯತೆಯಿದ್ದು, ರದ್ದು ಮಾಡುತ್ತಿರುವುದು ಇಲಾಖೆ ಗಮನಕ್ಕೆ ಬಂದಿದೆಯೇ; | ರದ್ದುಪಡಿಸಿರುವುದಿಲ್ಲ.<br>2017-18ರ ಪೂರ್ವದಲ್ಲಿ ನೋಂದಣಿ ಪಡೆದ ಶಾಲೆಗಳಿಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ಅಗ್ನಿ ಸಮಾಪನಾ ಸುರಕ್ಷತಾ ಪತ್ರ ಹಾಗೂ ಭೂ ಪರಿವರ್ತನೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಆಡಳಿತ ಮಂಡಳಿಯಿಂದ ಮುಚ್ಚಳಿಕೆ ಪ್ರಮಾಣ ಪತ್ರ ಪಡೆದು ಒಂದು ವರ್ಷಕ್ಕೆ ಮಾನ್ಯತೆ ನವೀಕರಣ ನೀಡಲು ಕ್ರಮವಹಿಸಲಾಗುತ್ತಿದೆ. |
| ಆ) | ರಾಜ್ಯದಲ್ಲಿ ಎಷ್ಟು ಶಾಲೆಗಳನ್ನು ಅಗ್ನಿಶಾಮಕ ಸಲಕರಣೆ ಒದಗಿಸದೇ ಇರುವುದರಿಂದ ಮಾನ್ಯತೆ ರದ್ದುಗೊಳಿಸಲಾಗಿದೆ; (ವಿವರ ನೀಡುವುದು) | ಮೇಲಿನಂತೆ ಕ್ರಮವಹಿಸುವುದರಿಂದ ರದ್ದು ಮಾಡಿರುವುದಿಲ್ಲ. |
| ಇ) | ಗ್ರಾಮೀಣ ಭಾಗದಲ್ಲಿ ಕಟ್ಟಡಗಳಿಗೆ ಅಗ್ನಿಶಾಮಕ ಪೈಪ್‌ಗಳನ್ನು ಅಳವಡಿಸಲು ಮತ್ತು ಅದಕ್ಕೆ ತಗಲುವ ವೆಚ್ಚ ಭರಿಸಲು ಸರ್ಕಾರದಿಂದ ಸಹಾಯಧನ ನೀಡಲಾಗುತ್ತಿದೆಯೇ; ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು; ಈ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; (ವಿವರ ನೀಡುವುದು) | ಸಹಾಯಧನ ನೀಡುತ್ತಿಲ್ಲ.<br>ಸಹಾಯಧನ ನೀಡುವ ಪ್ರಸ್ತಾವನೆ ಇರುವುದಿಲ್ಲ. |
| ಈ) | ಸರ್ಕಾರಿ ಶಾಲೆಗಳಿಗೂ ಅಗ್ನಿಶಾಮಕ ಸಲಕರಣೆ ಅಳವಡಿಸಲು ಇಲಾಖೆ ಕ್ರಮ ಕೈಗೊಂಡಿದೆಯೇ; ಈ ಬಗ್ಗೆ ಎಷ್ಟು ಹಣ ಮೀಸಲಿಡಲಾಗಿದೆ? (ವಿವರ ನೀಡುವುದು) | ಇಲ್ಲ. |

ಸಂಖ್ಯೆ: ಇಪಿ 393 ಪಿ ಜಿ ಸಿ 2024

(ಎಸ್.ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು